**ಇಂದು ದಿಃ 06-08-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆ : ಶ್ರೀ ಇ.ಎಂ. ವಕೀಲರಿಂದ ವಾದಿಯರ ಪರ:

**ನಾನು, ನನ್ನ ಮುಖ್ಯ ವಿಚಾರಣೆಯ ಅಂಶಗಳನ್ನು ಪ್ರಮಾಣ ಪತ್ರದ ರೂಪದಲ್ಲಿ ಸಲ್ಲಿಸಿದ್ದು, ಅದರಲ್ಲಿ ಬರೆದ ಸಂಗತಿಗಳು ಸತ್ಯವಾಗಿರುತ್ತವೆ.**

ನಾನು ಒಂದು ಮದುವೆಯ ಆಮಂತ್ರಣ ಪತ್ರಿಕೆಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ-1 ಎಂದು, 3 ಪೋಟೋಗಳನ್ನು ತಕರಾರಿಗೆ ಒಳಪಟ್ಟು ಒಟ್ಟಿಗೆ ನಿ.ಪಿ-2 ಎಂದು, 2 ನೇ ವಾದಿಯ ಒಂದು ಶಾಲಾ ವರ್ಗಾವಣೆ ಪ್ರಮಾಣ ಪತ್ರವನ್ನು ನಿ.ಪಿ-3 ಎಂದು, ಎಂ.ಆರ್ ನಂಬರ್-115/1993-94 ಇದರ ದೃ.ನಕಲನ್ನು ನಿ.ಪಿ-4 ಎಂದು, ಸರ್ವೆ ನಂಬರ್-4/1 ಬಿ/ಪಿ ಇದರ 1990-91 ರಿಂದ 1994-95 ರವರೆಗಿನ ಪಹಣಿಯ ದೃ.ನಕಲನ್ನು ನಿ.ಪಿ-5 ಎಂದು, ಸರ್ವೆ ನಂಬರ್-4/1 ಬಿ/ಪಿ ಇದರ 1995-96 ರಿಂದ 2000-2001 ರವರೆಗಿನ ಪಹಣಿಯ ದೃ.ನಕಲನ್ನು ನಿ.ಪಿ-6 ಎಂದು, ಸರ್ವೆ ನಂಬರ್-4/1 ಬಿಪಿ-2 ಇದರ 2005-06 ರ ಪಹಣಿ ಹೊರತುಪಡಿಸಿ, 2001-2002 ರಿಂದ 2021-2022 ರವರೆಗಿನ ಸರ್ವೆ ನಂಬರ್-4/1 ಬಿಪಿ-2 ಇದರ ಪಹಣಿಗಳನ್ನು ಒಟ್ಟಿಗೆ ನಿ.ಪಿ-7 ಎಂದು, ಪ್ರತಿವಾದಿ ತಹಶಿಲ್ದಾರ ಇವರಿಗೆ ನೀಡಿದ ಅರ್ಜಿಯ ದೃ.ನಕಲನ್ನು ನಿ.ಪಿ-8 ಎಂದು, ನಾನು ನೀಡಿದ ತಕರಾರಿನ ದೃ.ನಕಲನ್ನು ನಿ.ಪಿ-9 ಎಂದು, ದಿನಾಂಕಃ16-03-2020 ರ ತಹಶಿಲ್ದಾರ ಇವರ ಆದೇಶದ ದೃ.ನಕಲನ್ನು ನಿ.ಪಿ-10 ಎಂದು, ದಿನಾಂಕಃ10-07-1980 ರ ಒಂದು ಮುಟೇಷನ್ ಎಂಟ್ರಿಯ ದೃ.ನಕಲನ್ನು ನಿ.ಪಿ-11 ಎಂದು,

3 ಪೋಟೋಗಳನ್ನು ಒಟ್ಟಿಗೆ ನಿ.ಪಿ-12 ಎಂದು, ಒಂದು ಸಿ.ಡಿಯನ್ನು ನಿ.ಪಿ-13 ಎಂದು ಗುರುತಿಸಲಾಯಿತು.

ದಿನಾಂಕಃ19-01-2023 ರ ಎ.ಸಿ ದಾವಣಗೆರೆ ಇವರ ಆದೇಶದ ದೃ.ನಕಲನ್ನು ನಿ.ಪಿ-14 ಎಂದು ಗುರುತಿಸಲಾಯಿತು.

**ಮುಂದಿನ ಮುಖ್ಯ ವಿಚಾರಣೆಗೆ ವಾದಿ ಪರ ವಕೀಲರು ಸಮಯಕೇಳಿದ್ದು, ನೀಡಲಾಯಿತು.**

(ತೆರೆದ ನ್ಯಾ . ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಹರಿಹರ.**